1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ.3370/2017

ದಿಃ 06.07.2019 ರಂದು ಪ್ರಮಾಣೀಕರಿಸಲಾಯಿತು.

ಪ್ರಾಸಾಃ 4

ಚಾಸಾಃ 11

| | |
|---|---|
| ಹೆಸರು | ಃ ಶಿವಕುಮಾರಸ್ವಾಮಿ |
| ತಂದೆಯ ಹೆಸರು | ಃ ಸಿದ್ದಲಿಂಗಯ್ಯ |
| ವಯಸ್ಸು | ಃ 44 ವರ್ಷ |
| ಉದ್ಯೋಗ | ಃ ವೈದ್ಯಾಧಿಕಾರಿ, ರಾಜೀವ್ ಗಾಂಧಿ ಇನ್ಸ್ಟಿಟ್ಯೂಟ್ ಅಫ್ ಚೆಸ್ಟ್ ಡಿಸೀಸಸ್. |
| ವಾಸ | ಃ ಬೆಂಗಳೂರು. |

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಸಾಗರ್ ಆಸ್ಪತ್ರೆಯಲ್ಲಿ ಯಾವತ್ತು ಕೆಲಸ ಮಾಡಿರುವುದಿಲ್ಲ. ನಾನು ಮಲ್ಯ ಆಸ್ಪತ್ರೆಯಲ್ಲಿ 2010 ರಿಂದ 2016 ವೈದ್ಯಾಧಿಕಾರಿಯಾಗಿ ಕೆಲಸ ನಿರ್ವಹಿಸಿದ್ದೆ. ಈಗ ನನಗೆ ತೋರಿಸಿರುವ ನಿಪಿ.9 ಮತ್ತು ನಿಪಿ.10 ರಲ್ಲಿ ನನ್ನ ಸಹಿ ಇರುವುದಿಲ್ಲ. ಈ ಬಗ್ಗೆ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್‌ಎಸ್ ವಕೀಲರಿಂದಃ-

ನಾನು ಸಾಗರ್ ಆಸ್ಪತ್ರೆಯಲ್ಲಿ ಯಾವತ್ತು ಕೆಲಸ ಮಾಡಿಲ್ಲ ಹಾಗೂ ಸಾಗರ್ ಆಸ್ಪತ್ರೆಯ ರಸೀದಿಗಳಲ್ಲಿ ಯಾವತ್ತು ಸಹಿ ಮಾಡಿಲ್ಲ. ಈ ರೀತಿ ನಾನು ಪೊಲೀಸ್‌ನವರಿಗೆ ಹೇಳಿಕೆಯನ್ನು ಕೊಟ್ಟಿದ್ದೇನೆ. ನಾನು ಸದರಿ ದಾಖಲೆಗಳಿಗೆ ನನ್ನ ಸಹಿ ಫೋರ್ಜರಿಯಾಗಿದೆ ಎಂದು ಯಾವುದೇ ದೂರನ್ನು ಕೊಟ್ಟಿಲ್ಲ. ಆರೋಪಿಗಳನ್ನು ಈ ಮೊದಲು ಯಾವತ್ತು ನೋಡಿರುವುದಿಲ್ಲ.

<u>ಮರುವಿಚಾರಣೆಃ ಇಲ್ಲ</u>

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇ.**

1ನೇ ಅ. ಮು. ಮ. ದಂ. ನ್ಯಾಯಾಲಯ